'ವ್ವ್... ವ್ವಾಟ್ಟ್?...'

'ಹೌದು... ಅವಳು ಇದನ್ನು ಬಯಸಿದ್ದಳು. ತನ್ನ ಮರಣೋತ್ತರ ಕ್ರಿಯೆಯಷ್ಟೂ ನಿಮ್ಮ ಮೂಲಕವೇ ಜರುಗಬೇಕು ಅನ್ನೋ ಆಸೆ ಇತ್ತು ಅವಳಿಗೆ...'

'ಹಿಮಾದ್ರಿ... ನಿಮಗೆ ಅವಳನ್ನು ಮದುವೆಯಾದ ಸಂಬಂಧವಿದೆ. ನಿಮ್ಮ ಮಗಳನ್ನು ಹೆತ್ತ ಮೈ ಸಂಬಂಧವೂ ಇದೆ... ಕಶ್ಯಪ ಗೋತ್ರದವರು ನೀವು... ಹಾಗಾಗಿ ಅವಳು ಕಾಶ್ಯಪಿ!'

'....'

'ಆದರೆ ನಾನು ಅವಳ ಯಾವ ಸಂಬಂಧವನ್ನು ನನ್ನದು ಅಂತ ಇಟ್ಟುಕೊಳ್ಳೋದು ಹೇಳಿ?'

'ನಿಮ್ಮ ಅವಳ ಸಂಬಂಧ ಏನು ಅಂತ ನಿಮಗೆ ಗೊತ್ತು... ಅವಳಿಗೆ ಇನ್ನೂ ಚೆನ್ನಾಗಿ ಗೊತ್ತಿತ್ತು. ನಿಮ್ಮನ್ನು ನೆನೆಯದ ದಿನವೇ ಇರಲಿಲ್ಲ ಅವಳ ಬದುಕಿನಲ್ಲಿ...' ಇಷ್ಟು ಹೇಳುವಾಗ ಹಿಮಾದ್ರಿ ಸತ್ಪತಿಯ ಮಾತು ಸೋಲತೊಡಗಿತು.

ಸಂದುಹೋದ ಹೂವು ಕಣ್ಮನಸ್ಸು ತುಂಬಿಬಂದಳು. ಇಷ್ಟಾರ್ಥವೀಯುತ್ತಲೇ ಅಂತರ್ಧಾನವಾದ ದೇವತೆಯ ಹಾಗೆ ಅನ್ನಿಸಿದಳು. ನಾನೇ ಕೈಯಾರೆ ಸಜ್ಜುಗೈದ ಅವಳ ಮೋರೆ ಕಣ್ಮುಂದೆ ತೋರಿಬಂತು. ಹೂವಂತಹ ಅವಳ ಒಡಲು ಕಣ್ಣೆದುರೇ ಬೆಂಕಿಗೀಡಾಗಿದ್ದು ಕಟ್ಟಿಬಂತು. ಧಗಭಗನೆ ಉರಿದುರಿದು ಚಟಪಟನೆ ಕಿಡಿಕಾರುವ ಕಿಚ್ಚಿನ ಸುಡುಗಾಡು ಚಡಪಡಿಕೆ ಮೂಡಿಬಂತು. ಸುಡಲೇನೂ ಮಿಗದೆಯೇ ಸುಟ್ಟು ಹಿಮ್ಮಿಕ್ಕ ಬರೇ ಬೂದಿಯೊಳಗೆ ಅವಳಿದ್ದಾಳೆಯೇ ಎಂದು ಒತ್ತರಿಸಿ ಅನ್ನಿಸಿಬಂತು... ಅಲ್ಲಾ, ಈ ಹೆಣ್ಣಿನ ಮೈ ಸುಟ್ಟರೂ ನನ್ನೊಳಗಿನ ಮೋಹವೇಕೆ ಸುಡಲೊಲ್ಲದು? ನನ್ನನ್ನೇ ಸುಡಲು ಹೊಂಚಿಕೊಂಡು ಉಳಿದಿದೆಯೇ? ಅಥವಾ ಸುಟ್ಟಿದ್ದಾದರೂ ಏನು? ಅವಳೇ? ಅವಳ ಮೈಯೆ? ಸೌಂದರ್ಯವೇ? ಅಥವಾ, ಆ ಸೌಂದರ್ಯವನ್ನು ಅವಳ ಕಳೇವರದ ಮೇಲೆ ಮತ್ತೊಮ್ಮೆ ಉಂಟಾಗಿಸಿದ ನನ್ನ ಸಿಂಗಾರವೇ? ನನ್ನ ಕೈಚಳಕವೇ?

ತಿಳಿಯದಾದೆ!

'ಹಿಮಾದ್ರಿ... ಕಡೆಯದಾಗಿ ಒಂದು ವಿಷಯ. ಅವಳು ವಿನಾಕಾರಣ ನನ್ನನ್ನು ಬಿಟ್ಟುಹೋದಳಲ್ಲ, ಯಾಕೆ ಅಂತ ನಿಮಗೇನಾದರೂ ಗೊತ್ತಾ?' ಯಾಚಕನ ಹಾಗೆ ಕೇಳಿದೆ.

'ವಿನಾಕಾರಣ ನನ್ನನ್ನೂ ಬಿಟ್ಟುಹೋಗಲಿಲ್ಲವಾ, ಕೋವಲನ್?' ಅನ್ನುತ್ತ ಹಿಮಾದ್ರಿ ಬಿಕ್ಕಿ ಬಿಕ್ಕಿ ಅತ್ತುಬಿಟ್ಟ.

ಇಬ್ಬರು ಸಮಾನದುಃಖಿಗಳ ಸಾಂತ್ವನಕ್ಕೆ ಮೂರನೆಯ ಯಾರೂ ಒಡನಿರಲಿಲ್ಲ!

## ನಾಗರಾಜ ವಸ್ತಾರೆ

ಕವಿ, ಕತೆಗಾರ, ಪ್ರಬಂಧಕಾರ, ಆರ್ಕಿಟೆಕ್ಟ್ ನಾಗರಾಜ ವಸ್ತಾರೆ 'ಹಕೂನ ಮಟಾಟ', 'ನಿರವಯವ', '90 ಡಿಗ್ರಿ', '180 ಡಿಗ್ರಿ' ಎಂಬ ಕಥಾಸಂಕಲನಗಳನ್ನೂ, 'ಮಡಿಲು', 'ಅರ್ಬನ್ ಪ್ಯಾಂಥರ್' ಎಂಬ ನೀಳ್ಗತೆಗಳನ್ನೂ, 'ಬಣ್ಣದ ದಂಗೆ' ಎಂಬ ಕಾದಂಬರಿಯನ್ನೂ ಪ್ರಕಟಿಸಿದ್ದಾರೆ. 'ಹಳೆಮನೆ ಕತೆ', 'ಕಮಾನು ಕಟ್ಟುಕತೆ ಕಟ್ಟುಪಾಡು' ಅವರ ಅಂಕಣ ಬರಹಗಳ ಸಂಕಲನವಾದರೆ, 'ಸಾಂಚಿಮುದ್ರೆ' ಮತ್ತು 'ಪಟ್ಟಣ ಪುರಾಣ' ಅವರ ಪ್ರಬಂಧಸಂಗ್ರಹಗಳು. 'ವಸ್ತಾರೆ ಪದ್ಯಗಳು' ಮತ್ತು 'ವಸ್ತಾರೆ ಇನ್ನೂ 75' ಕವನ ಸಂಕಲನಗಳು. 2018ರ ಜನವರಿಯಲ್ಲಿ ವಸ್ತಾರೆಯವರ 8 ಪುಸ್ತಕಗಳು ಒಟ್ಟೊಟ್ಟಿಗೆ ಬೆಳಕು ಕಂಡಿವೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.